**ಎಂ.ವಿ.ಸಿ. 329/2022, ಪಿ.ಡಬ್ಲೂ-1 ಹೆಸರುಃ ಭಾರತಿ**

**ದಿಃ17-06-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ.ಆರ್. ವಕೀಲರಿಂದಃ**

ಹೊಳಲ್ಕೆರೆ ಪೊಲೀಸ್ ಠಾಣೆಯ ಠಾಣಾ ಮೊಖದ್ದಮೆ ಸಂಖ್ಯೆ 49/2021 ಕ್ಕೆ ಸಂಬಂಧಿಸಿದ ದೂರು, ಪ್ರಥಮ ವರ್ತಮಾನ ವರದಿ, ಮಹಜರು, ವಾಹನ ಬಿಡುಗಡೆ ಪಂಚನಾಮೆ, ವಾಹನ ತಪಾಸಣ ವರದಿ, ನನಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರ ಮತ್ತು ದೋಷಾರೋಪಣ ಪಟ್ಟಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.1 ರಿಂದ 7 ಎಂದು ಗುರುತಿಸಲಾಯಿತು. ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆ, ದಾವಣಗೆರೆ ರವರು ನೀಡಿರುವ 20 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು ನಿಪಿ.8(1) ರಿಂದ 8(20) ಎಂದು ಗುರುತಿಸಲಾಯಿತು.

**ಎದುರುದಾರರು ಮತ್ತು ಎದುರುದಾರರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ